ನೀರಾವರಿ ಇಲಾಖೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು

782 - ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ಅಡಿಯಲ್ಲಿ ಬರುವ ಎಲ್ಲಾ ಅಧೀನ ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಇದೆಯೇ? (ಇಲಾಖಾವಾರು ಉತ್ತರಗಳನ್ನು ನೀಡುವುದು)*

ಆ) *ಹಾಗಿದ್ದಲ್ಲಿ, ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ನೀರಾವರಿ ಇಲಾಖೆಯು ಲೋಕೋಪಯೋಗಿ ಇಲಾಖೆಯಿಂದ ಬೇರ್ಪಟ್ಟಿದ್ದರೂ ಇನ್ನೂ ಯಾವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿರುವುದಿಲ್ಲ ಈ ಹಿಂದೆ ನೀರಾವರಿ ಇಲಾಖೆಯಲ್ಲಿರುವ ಎಲ್ಲ ವೃಂದದ ಹುದ್ದೆಗಳ ಭರ್ತಿ ಮುಂಬಡ್ತಿಯನ್ನು ಲೋಕೋಪಯೋಗಿ ಇಲಾಖೆಯೇ ವ್ಯವಹರಿಸುತ್ತಿದ್ದು ನೀರಾವರಿ ಇಲಾಖೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಪ್ರಶ್ನೆ ಉದ್ಭವಿಸುವುದಿಲ್ಲ. ನೀರಾವರಿ ಇಲಾಖೆಯ ಅಧೀನ ಇಲಾಖೆಯ ವ್ಯಾಪ್ತಿಯಲ್ಲಿ 5 ಕಾಡಾ ಪ್ರಾಧಿಕಾರಗಳು ಮತ್ತು ಜಲ ಮತ್ತು ನೆಲನಿರ್ವಹಣೆ ಸಂಸ್ಥೆ ಬರುತ್ತದೆ. ಕಾಡಾ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ 1996ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳು ಜಾರಿಗೆ ಬಂದಿದ್ದು ಇದಾದ ನಂತರ ಕಾಡಾಗಳಲ್ಲಿ ಯಾವ ನೇಮಕಾತಿಗಳನ್ನು ಮಾಡಿರುವುದಿಲ್ಲ. ವಾಲ್ಮಿ ಸಂಸ್ಥೆಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕ್ರಿಯೆ ನಡೆದಿದೆ. ಇಲ್ಲಿಗೆ ಇನ್ನೂ ನೇಮಕಾತಿಗಳನ್ನು ಮಾಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಕಬಿನಿ 2ನೇ ಹಂತದ ಯೋಜನೆ

783 - ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಬಿನಿ 2ನೇ ಹಂತ ಯೋಜನೆಯ ಪರಿಷ್ಕೃತ ಮಾಡಲಾಗಿದೆಯೇ?*

ಆ) *ಹಾಗಿದ್ದಲ್ಲಿ, ಈ ಬಗ್ಗೆ ಮಾಹಿತಿ ನೀಡುವುದು?*

ಇ) *ಈ ಪರಿಷ್ಕೃತ ಯೋಜನೆಯಲ್ಲಿ ಹಿಂದೆ ಇದ್ದ ಹಳ್ಳಿಗಳೆಲ್ಲವು ಸೇರಿದೆಯೇ?*

ಈ) *ಹಾಗಿಲ್ಲದಿದ್ದಲ್ಲಿ, ಇದ್ದಲ್ಲಿ ಯಾವ ಯಾವ ಹಳ್ಳಿಗಳನ್ನು ಕೈಬಿಡಲಾಗಿದೆ?*

ಉ) *ಆ ಹಳ್ಳಿಗಳನ್ನು ಕೈಬಿಡಲು ಕಾರಣಗಳೇನು?*